ಓ.ಎಸ್. ನಂ.*65/2008*

ಡಿ.ಡಬ್ಲು-*1*

ಸಾಕ್ಷಿಯನ್ನು ಇಂದು ದಿನಾಂಕಃ *09.12.2022* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಎಸ್.ಎ.ಪಿ. ವಕೀಲರಿಂದ.**

ದಿ: 07.05.1973 ರ ಖರೀದಿ ಪತ್ರದ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ಡಿ-೨೪ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀ ಬಿ.ಎ.ಡಿ. ವಕೀಲರಿಂದ**

ನನ್ನ ತಾಯಿಗೆ ನಿಡಿ-೨೪ರಲ್ಲಿ ತೋರಿಸಿರುವ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂಧರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಎಷ್ಟು ಆಸ್ತಿ ಇತ್ತು ಅಷ್ಟನ್ನು ಮಾರಿರುತ್ತಾರೆ ಎಂದು ನುಡಿಯುತ್ತಾರೆ. ಖರೀದಿದಾರ ಭೀಮಣ್ಣ ಜೀವಂತ ಇದ್ದಾರೆ ಎಂದರೆ ಸರಿ. ಆರೋಗ್ಯ ಚೆನ್ನಾಗಿದೆ, ಕಿವಿ ಕೇಳುತ್ತಿಲ್ಲ ಎಂದು ನುಡಿಯುತ್ತಾರೆ. ಕಬೂಲಾ ತಂದೆ ಮಶಾಖಸಾಬ ಸೈದು ಮತ್ತು ಬಂಡೆಪ್ಪ ಇವರ ಪರಿಚಯ ಇದೆಯಾ ಎಂದರೆ ಸಾಕ್ಷಿಯು ಕಬೂಲಾ ನನ್ನ ತಾಯಿಯ ಸೋದರತ್ತೆಯ ಗಂಡ, ಬಂಡೆಪ್ಪ ಪರಿಚಯ ಇರುವುದಿಲ್ಲ, ಅವನು ತೀರಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ಈ ಖರೀದಿ ಹಿಡಿದ ಭೀಮಣ್ಣನು ಆರೋಗ್ಯವಾಗಿದ್ದೇನೆ, ಅವನು ಸಮಚಿತ್ತದಿಂದ ಇದ್ದಾನೆ ಎಂಧರೆ ಸರಿ ಅಲ್ಲ. ಸದರಿ ಭೀಮಣ್ಣನು ಆಳಂದದ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವೆ ನಂ. 130/2022 ರನ್ನು ಅವರ ತಮ್ಮನ ಧರ್ಮಪತ್ನಿಯ ಮೇಲೆ ಹೂಡಿರುತ್ತಾನೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ರಶೀದಾ ಬೇಗಂ ಮತ್ತು ಭೀಮಣ್ಣ ಇಬ್ಬರೂ ಸೇರಿ ಖೊಟ್ಟಿಯಾಗಿ ಕಾಗದ ಪತ್ರಗಳನ್ನು ಸೃಷ್ಟಿಸಿರುತ್ತಾರೆ ಎಂಧರೆ ಸರಿ ಅಲ್ಲ. ಭೀಮಣ್ಣನ ಕಡೆಯಿಂದ ನಾನು ಖರೀದಿ ಮಾಡಿರುತ್ತೇನೆ. ನನ್ನ ತಾಯಿ ಭೀಮಣ್ಣನಿಗೆ ಮಾರಾಟ ಮಾಡುವ ಸಮಯದಲ್ಲಿ ಭೀಮಣ್ಣ ನನ್ನ ತಾಯಿಗೆ ಹಣ ನೀಡಿರುವುದಿಲ್ಲ, ನಾನು ಖರೀದಿ ಮಾಡುವ ಸಮಯದಲ್ಲಿ ನಾನು ಭೀಮಣ್ಣನಿಗೆ ಖರೀದಿ ಹಣ

ನೀಡಿರುವುದಿಲ್ಲ ಎಂದರೆ ಸರಿ ಅಲ್ಲ. ರಶೀದಾ ಬೇಗಂ ತಾನು ಅಬ್ದುಲ ರಜಾಕ ಖಾಜಿ ಅವರ ಕಡೆಯಿಂದ 12*25 ಜಾಗೆಯನ್ನು ಮಾತ್ರ ಖರೀದಿ ಹಿಡಿದಿರುತ್ತಾರೆ, ಜಾಗವನ್ನು ಹೆಚ್ಚಿದೆ ಎಂದು ತೋರಿಸಿಕೊಳ್ಳಲು ನಿಮ್ಮ ತಾಯಿ ಭೀಮಣ್ಣನಿಗೆ ಹೆಚ್ಚಿಗೆ ತೋರಿಸಿ ಮರಳಿ ಭೀಮಣ್ಣನಿಂದ ಪಡೆದು ಖರೀದಿಸಿದ್ದಾರೆ ಎಂದರೆ ಸರಿ ಅಲ್ಲ. ರಶೀದಾ ಬೇಗಂ ಭೀಮಣ್ಣನಿಗೆ ಆಸ್ತಿಯನ್ನು ಮಾರಾಟ ಮಾಡಿ ಕಬ್ಜಾ ನೀಡಿರುವುದಿಲ್ಲ ಎಂಧರೆ ಸರಿ ಅಲ್ಲ. ಸುಮಾರು 5-6 ವರ್ಷ ನಾವು ಅದನ್ನು ಮಾರಿ ಬೇರೇ ಜಾಗದಲ್ಲಿ ಬಾಡಿಗೆ ಇದ್ದೆವು. ಕಬ್ಜಾದಲ್ಲಿ ನಾವೇ ಇದ್ದು, ಭೀಮಣ್ಣನಿಗೆ ಕಬ್ಜಾ ನೀಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿ ಅಲ್ಲ. ಸಾರ್ವಜನಿಕ ರಸ್ತೆಯನ್ನು ಕಬಳಿಸಬೇಕೆನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.